




ಯುವಕರು ಇಷ್ಟೆಲ್ಲ ಪ್ರಯೋಗಮುಖಿಗಳಾಗಿದ್ದರೂ 'ಸ್ಕಿನ್ ಫಿಟ್' ಮಾರುಕಟ್ಟೆ ಈಗಲೂ ಜೋರಾಗಿ ಇರುವುದು ಯಾಕೆ ಎಂಬ ಪ್ರಶ್ನೆ ಮೂಡುತ್ತದೆ. ಕೆಲವರ ಪ್ರಕಾರ ಜಿಮ್ ಮೋಹ ಇದಕ್ಕೆ ಒಂದು ಕಾರಣ. ತಮ್ಮ ದೇಹಾಕಾರವನ್ನು ನೋಡಿ ಬೇರೆಯವರು ಮೆಚ್ಚಿಕೊಳ್ಳಲಿ ಎಂಬ ಸಹಜ ಪ್ರಜ್ಞೆ ಇದರಲ್ಲಿ ಕೆಲಸ ಮಾಡುತ್ತಿರುತ್ತದೆ. ಸಾಹಸ ಪ್ರಧಾನ ಸಿನಿಮಾಗಳಲ್ಲಿ ನಾಯಕನ ಹುರಿಗಟ್ಟಿದ ದೇಹವನ್ನು ತೋರಲು ಇಂಥ ಮೈಗಂಟಿದ ಬಟ್ಟೆಗಳ ಬಳಕೆ ವ್ಯಾಪಕವಾಗುತ್ತಿದೆ. ಧಾರಾವಾಹಿ ನಟರ ಮೈಗೂ ಅದು ಅಂಟಿಕೊಂಡಿರುವುದು ಇದೇ ಕಾರಣಕ್ಕೆ. ವಿವಿಧ ಶೇಡ್‌ಗಳ ಕಂದು, ಬೂದು, ಕಿತ್ತಳೆ, ತೆಳು ಹಸಿರು, ಲಿಂಬೆ ಹಳದಿ ಹೀಗೆ ಬಗೆ ಬಗೆ ಬಣ್ಣಗಳ 'ಸ್ಕಿನ್ ಟೈಟ್' ಬಟ್ಟೆಗಳಿಗಿದು ಸುವರ್ಣಕಾಲ.

ಹೆಣ್ಣುಮಕ್ಕಳು ಹೆಚ್ಚಾಗಿ ಇಷ್ಟಪಡುತ್ತಿರುವ ನಾಯಕ ವಿಜಯ್ ದೇವರಕೊಂಡ ಪ್ರಕಾರ ಪಾತ್ರದ ರೂಹಿಗೆ ತಕ್ಕ ಬಟ್ಟೆಗಳನ್ನು ಸಾಮಾನ್ಯವಾಗಿ ಸಿನಿಮಾ ವಸ್ತ್ರವಿನ್ಯಾಸಕರು ತೊಡಿಸುತ್ತಾರೆ. ಅವುಗಳಲ್ಲಿ ಕೆಲವು ಟ್ರೆಂಡ್ ಆಗುತ್ತವೆ. ಅವರು 'ನೋಟಾ' ತಮಿಳು, ತೆಲುಗು ಸಿನಿಮಾದಲ್ಲಿ ತೊಟ್ಟಿರುವ ಬಟ್ಟೆಗೂ 'ಗೀತಗೋವಿಂದಂ'ನಲ್ಲಿ ಹಾಕಿದ ದಿರಿಸುಗಳಿಗೂ ಇರುವ ವ್ಯತ್ಯಾಸವನ್ನು ಉದಾಹರಣೆಯಾಗಿ ಕೊಡುತ್ತಾರೆ.

ಬಟ್ಟೆಗಳ ಟ್ರೆಂಡ್ ಕುರಿತು ಮಾತನಾಡುತ್ತಿರುವ ಈ ಹೊತ್ತಿನಲ್ಲಿ 'ಸುಯಿ ಧಾಗಾ' ಹಿಂದಿ ಸಿನಿಮಾ ಸದ್ದು ಮಾಡಿದೆ. ಅದರಲ್ಲಿನ ಒಂದು ಸಣ್ಣಕಥೆ ಹೀಗಿದೆ: ಆಸ್ಪತ್ರೆಗೆ ಹೃದ್ರೋಗ ಶಸ್ತ್ರಚಿಕಿತ್ಸೆಗೆ ಸೇರಿದ ಅಮ್ಮನಿಗೆ ಸೀರೆ ಉಡುವುದು ಕಷ್ಟವಾಗುತ್ತದೆ. ಮಗ ಮನೆಯ ಕರ್ಟನ್ನುಗಳನ್ನೆಲ್ಲ ತೆಗೆದು, ಕಟ್ ಮಾಡಿ ಅಮ್ಮನಿಗೊಂದು ಗೌನು ಹೊಲೆಯುತ್ತಾನೆ. ಅದರ ಮೇಲೆ ಅಲ್ಲಲ್ಲಿ ಚಿತ್ತಾರ ಮಾಡಿ, ಬಣ್ಣದ ಪ್ರಿಂಟ್ ಕೂಡ ಹಾಕುತ್ತಾನೆ. ಕ್ರೀಂ ಬಣ್ಣದ ಆ ಗೌನನ್ನು ನೋಡಿ ಆಸ್ಪತ್ರೆಯ ಇನ್ನೂ ಹಲವಾರು ರೋಗಿಗಳು ಗೌನ್ ಹೊಲೆದುಕೊಡುವಂತೆ ಅವನಿಗೆ ದುಂಬಾಲು ಬೀಳುತ್ತಾರೆ. ಹೀಗೇ ವಸ್ತ್ರ ಮಾರುಕಟ್ಟೆಯ ಹೊಸತೊಂದು ಅಧ್ಯಾಯ ಅಲ್ಲಿ ಶುರುವಾಗಿ ಬಿಡುತ್ತದೆ.

ಬಟ್ಟೆಗಳು ಗಂಡಸರದಿರಲಿ, ಮಹಿಳೆಯರದಿರಲಿ; ಟ್ರೆಂಡ್ ಹೇಗೆ ಸೃಷ್ಟಿಯಾಗುತ್ತದೆ ಎಂದು ವಸ್ತ್ರವಿನ್ಯಾಸಕರಿಗೂ ಹೇಳಲಾಗದು. ತಮ್ಮ ತಮ್ಮ ಮಿತಿಗಳಲ್ಲೇ ಎಲ್ಲರೂ ಪ್ರಯೋಗಗಳನ್ನಂತೂ ಮುಂದುವರಿಸುತ್ತಾರೆ. 'ಬಿಗ್ ಬಾಸ್' ನಿರೂಪಣೆ ಮಾಡುವಾಗ ಸುದೀಪ್ ತೊಡುತ್ತಿದ್ದ ಬಗೆ ಬಗೆ ವಿನ್ಯಾಸದ ಬಟ್ಟೆಗಳನ್ನೊಮ್ಮೆ ನೆನಪಿಸಿಕೊಳ್ಳಿ.